**ಅರಸೀಕೆರೆ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯದಲ್ಲಿ**

**ಸಿ.ಸಿ. ನಂಃ 216/20**

| | | | |
|---|---|---|---|
| ಸಾಕ್ಷಿದಾರರ ಹೆಸರು | ಪ್ರಕಾಶ | ಸಿ.ಡಬ್ಲ್ಯೂ- | 5 |
| ತಂದೆ/ಗಂಡನ ಹೆಸರು | ಶಿವರುದ್ರಪ್ಪ | ಪಿ.ಡಬ್ಲ್ಯೂ | 2 |
| ವಯಸ್ಸು | 45 ವರ್ಷ | ಪ್ರಮಾಣ ವಚನ ಭೋಧಿಸಿದ ದಿನಾಂಕ | |
| ವೃತ್ತಿ | ಪೇಟಿಂಗ್ ಕೆಲಸ | | |
| ವಾಸ | ಸುಬ್ರಹ್ಮಣ್ಯ ನಗರ, ಅರಸೀಕೆರೆ. | 24.01.2024 | |

ಮುಖ್ಯ ವಿಚಾರಣೆ ಸಸಅ ರವರಿಂದಃ-

ಈಗ ಸುಮಾರು **4-5** ವರ್ಷಗಳ ಹಿಂದೆ ಪೋಲೀಸರ ಕೋರಿಕೆಯ ಮೇರೆಗೆ ನಾನು ಒಂದು ದಾಖಲೆಗೆ ಸಹಿ ಹಾಕಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಂದೆ ಯಾವುದೇ ಮುದ್ದೆ ಮಾಲನ್ನು ಜಪ್ತು ಮಾಡಿರುವುದಿಲ್ಲ. ಸಾಕ್ಷಿಯು ಮಹಜರ್ ನಲ್ಲಿರುವ ತನ್ನ ಸಹಿಯನ್ನು ಗುರುತು ಹಿಡಿದಿರುವುದರಿಂದ ಸದರಿ ಮಹಜರ್ ನ್ನು ನಿಪಿ-**3** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**3**(ಎ) ಎಂದು ಗುರುತಿಸಲಾಗಿದೆ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸಸಅ ರವರಿಂದಃ-

ದಿಃ 31-12-2019 ರಂದು ಬೆಳಗ್ಗೆ 10-15 ರಿಂದ 11-15 ಗಂಟೆಯವರೆಗೆ ಬಿ.ಹೆಚ್.ರಸ್ತೆ ದಕ್ಷಿಣ ಭಾಗದಿಂದ 50 ಅಡಿ ದೂರದಲ್ಲಿರುವ ಶಾಮಲ ಹಾಗೂ ಗೋವಿಂದರಾಜು,ಎ.ಎಲ್. ರವರ ಖಾಲಿ ನಿವೇಶನದ ಬೇಲಿಯ ಪಕ್ಕದಲ್ಲಿ ಪೋಲೀಸರು ಒಂದು ಮಹಜರ್ ನ್ನು ಮಾಡಿದರು ಎನ್ನುವುದು ಸರಿಯಲ್ಲ. ಮಹಜರ್ ನ್ನು ಶ್ರೀಗಂಧದ ಮರದ ತುಂಡುಗಳನ್ನು ಹಾಗೂ ಚಕ್ಕೆಯನ್ನು ಕಳ್ಳತನ ಮಾಡಿರುವ ಹಿನ್ನೆಲೆಯಲ್ಲಿ ಮಾಡಲಾಗಿದೆ ಎನ್ನುವುದು ಸರಿಯಲ್ಲ. ಕೃತ್ಯ ನಡೆದ ಸ್ಥಳದಲ್ಲಿ ಹೊಸದಾಗಿ ಗಂಧದ ಮರವನ್ನು ಬೇರು ಸಮೇತ ಅಗೆದು ಹಾಕಿರುವುದು ಕಂಡು ಬರುತ್ತಿತ್ತು ಹಾಗೂ

2 ಇಂಟು 2 ಅಗಲದ ಗುಂಡಿ ಇರುವ ನಿಶಾನೆ ಕೂಡ ಇತ್ತು ನಾನು ಅದನ್ನು ನೋಡಿದ್ದೇನೆ ಎನ್ನುವುದು ಸರಿಯಲ್ಲ. ಘಟನಾ ಸ್ಥಳದಲ್ಲಿ ಪೂ-ಪಶ್ಚಿಮವಾಗಿ ಹಸಿರು ಗಿಡಗಳ ಬೇಲಿ ಇತ್ತು ಹಾಗೂ ಅಲ್ಲಿ ಒಂದು ಸಣ್ಣ ಶ್ರೀಗಂಧದ ಮರ ಇತ್ತು ಎನ್ನುವುದು ಸರಿಯಲ್ಲ. ಅಲ್ಲಿ ಶ್ರೀಗಂಧದ ಮರದ ಸಣ್ಣ ಸಣ್ಣ ಚೆಕ್ಕೆ ಚೂರು ಚೂರಾಗಿ ಬಿದ್ದಿದ್ದು ನಾವು ನೋಡಿದ್ದೇವೆ ಎನ್ನುವುದು ಸರಿಯಲ್ಲ. ಘಟನಾ ಸ್ಥಳದಿಂದ ಪಶ್ಚಿಮ ದಿಕ್ಕಿಗೆ ಸುಮಾರು 10 ಅಡಿ ದೂರದಲ್ಲಿ ಒಂದು ಕಾಂಪೌಂಡ್ ಇದ್ದು ಸದರಿ ಕಾಂಪೌಂಡ್ ನ ಪೊದೆಯಲ್ಲಿ ಆರೋಪಿತರು ಕೃತ್ಯಕ್ಕೆ ಉಪಯೋಗಿಸಿದಂತಹ ಮಚ್ಚು, ಗರಗಸದ ತುಂಡು, ಕಬ್ಬಿಣದ ಚೂಪಾದ ರಾಡು ನಮಗೆ ಸಿಕ್ಕಿರುತ್ತದೆ ಇವುಗಳನ್ನು ನಮ್ಮ ಸಮಕ್ಷಮ ಪೋಲೀಸರು ಜಪ್ತು ಮಾಡಿರುತ್ತಾರೆ ಎನ್ನುವುದು ಸರಿಯಲ್ಲ. ಹೀಗೆ ಜಫ್ತಾದ ನಂತರ ಪೋಲೀಸರು ಅಲ್ಲಿ ನಿಪಿ-3 ರ ಮಹಜರ್ ನ್ನು ಬರೆದರು ಹಾಗೂ ಫೋಟೋಗಳನ್ನು ತೆಗೆದರು ಎನ್ನುವುದು ಸರಿಯಲ್ಲ. ಈಗ ನನಗೆ ತೋರಿಸಿರುವ ಫೋಟೋದಲ್ಲಿ ನಾನು ಕಾಣಿಸುತ್ತಿದ್ದೇನೆ ಎನ್ನುವುದು ಸರಿ. ಸದರಿ ಫೋಟೋಗಳನ್ನು ನಿಪಿ-4 ಮತ್ತು 5 ಎಂದು ಗುರುತಿಸಲಾಗಿದೆ. ನಿಪಿ-4 ಹಾಗೂ 5 ರಲ್ಲಿ ನಾನು ಇರುವುದು ನಿಜ ಪೋಲೀಸರು ನನ್ನನ್ನು ಆ ಜಾಗದಲ್ಲಿ ಕರೆದುಕೊಂಡು ಹೋಗಿ ಮರ ತೋರಿಸಿದ್ದಾರೆ. ಪೋಲೀಸರು ಮಹಜರ್ ನ್ನು ನನಗೆ ಸಂಪೂರ್ಣವಾಗಿ ಓದಿ ಹೇಳಿದ ನಂತರ ನಾನು ಅದಕ್ಕೆ ಸಹಿ ಹಾಕಿದ್ದೇನೆ ಎನ್ನುವುದು ಸರಿಯಲ್ಲ. ನನಗೆ ಈ ಕೇಸಿನ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಕೂಡ ಆರೋಪಿಯ ಮಾತನ್ನು ಕೇಳಿ ನನಗೆ ಏನು ಗೊತ್ತಿಲ್ಲ ನಾನು ಯಾವುದು ನೋಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಪಾಟೀ ಸವಾಲುಃ ಇಲ್ಲಾ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

**( ಅನಿತ, ಜಿ. )**

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಅರಸೀಕೆರೆ.ದಿಃ **24-01-2024.**

ಅರಸೀಕೆರೆ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯದಲ್ಲಿ
ಸಿ.ಸಿ. ನಂಃ **216/20**

| | | | |
|---|---|---|---|
| ಸಾಕ್ಷಿದಾರರ ಹೆಸರು | ಶಶಿ | ಸಿ.ಡಬ್ಲ್ಯೂ- | 3 |
| ತಂದೆ/ಗಂಡನ ಹೆಸರು | ಜೀವರಾಜ್ | ಪಿ.ಡಬ್ಲ್ಯೂ | 3 |
| ವಯಸ್ಸು | 30 ವರ್ಷ | ಪ್ರಮಾಣ ವಚನ ಭೋಧಿಸಿದ ದಿನಾಂಕ | |
| ವೃತ್ತಿ | ಪೇಟಿಂಗ್ ಕೆಲಸ | | |
| ವಾಸ | ಹಾಸನ ರಸ್ತೆ, ಅರಸೀಕೆರೆ. | 24.01.2024 | |

ಮುಖ್ಯ ವಿಚಾರಣೆ ಸಸಅ ರವರಿಂದಃ-

ಈಗ ಸುಮಾರು **2** ವರ್ಷದ ಹಿಂದೆ ಪೋಲೀಸರ ಕೋರಿಕೆಯ ಮೇರೆಗೆ ನಾನು ಒಂದು ದಾಖಲೆಗೆ ಸಹಿ ಹಾಕಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಂದೆ ಯಾವುದೇ ಮುದ್ದೆ ಮಾಲನ್ನು ಜಪ್ತು ಮಾಡಿರುವುದಿಲ್ಲ. ಸಾಕ್ಷಿಯು ಮಹಜರ್ ನಲ್ಲಿರುವ ತನ್ನ ಸಹಿಯನ್ನು ಗುರುತು ಹಿಡಿದಿರುವುದರಿಂದ ಸದರಿ ಮಹಜರ್ ನ್ನು ಈಗಾಗಲೇ ನಿಪಿ-**1** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**1**(ಬಿ) ಎಂದು ಗುರುತಿಸಲಾಗಿದೆ. ನಾನು ಮಹಜರ್ ಗೆ ಮಧ್ಯಾಹ್ನ **2-00** ರಿಂದ **2-30** ಗಂಟೆ ಸಮಯದಲ್ಲಿ ಸಹಿ ಹಾಕಿದ್ದೇನೆ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸಸಅ ರವರಿಂದಃ-

ದಿಃ 30-12-2019 ರಂದು ಸಾಯಂಕಾಲ 6-30 ರಿಂದ 7-00 ಗಂಟೆಯವರೆಗೆ ಅರಸೀಕೆರೆ ನಗರ ಪೋಲೀಸ್ ಠಾಣೆಯಲ್ಲಿ ನನ್ನ ಸಮಕ್ಷಮ ಒಂದು ಮಹಜರ್ ಮಾಡಲಾಯಿತು ಎನ್ನುವುದು ಸರಿಯಲ್ಲ. ಆಗ ಕುಮಾರ್, ಚೆಲುವಮೂರ್ತಿ ಪೋಲೀಸರು ಎಲ್ಲರೂ ಹಾಜರಿದ್ದೆವು ಎನ್ನುವುದು ಸರಿಯಲ್ಲ. ಆ ದಿನ ಮಂಜೇಗೌಡ ಕೂಡ ಇದ್ದ ಎನ್ನುವುದು ಸರಿಯಲ್ಲ. ಮಹಜರ್ ಮಾಡುವಾಗ ಪೋಲೀಸರು 11 ಕೆ.ಜಿ.300 ಗ್ರಾಂ ಶ್ರೀಗಂಧದ ಮರದ ಚೆಕ್ಕೆಗಳನ್ನು ನನಗೆ ತೋರಿಸಿದರು ಹಾಗೂ ಅದನ್ನು ನನ್ನ ಸಮಕ್ಷಮ ಜಪ್ತು ಮಾಡಿದರು ಎನ್ನುವುದು ಸರಿಯಲ್ಲ. ಸದರಿ ಜಫ್ತಾದ ಮುದ್ದೆ

ಮಾಲುಗಳಲ್ಲಿ 1 ಅಡಿ ಉದ್ದ 7 ½ ಇಂಚು ನಡುವೆ ದಪ್ಪವಿರುತ್ತದೆ. 11 ಇಂಚು ಉದ್ದ 5 ½ ಇಂಚು ನಡುವೆ ದಪ್ಪವಿರುತ್ತದೆ. 13 ಇಂಚು ಉದ್ದ 5 ½ ಇಂಚು ನಡುವೆ ದಪ್ಪವಿರುತ್ತದೆ. 14 ½ ಇಂಚು ಉದ್ದ, 5 ಇಂಚು ನಡುವೆ ದಪ್ಪವಿರುತ್ತದೆ. 13 ½ ಇಂಚು ಉದ್ದ 7 ½ ಇಂಚು ನಡುವೆ ದಪ್ಪವಿರುತ್ತದೆ. 9 ಇಂಚು ಉದ್ದ, 6 ಇಂಚು ನಡುವೆ ದಪ್ಪವಿರುತ್ತದೆ. 7 ಇಂಚು ಉದ್ದ, 7 ½ ಇಂಚು ನಡುವೆ ದಪ್ಪವಿದ್ದು ಒಟ್ಟು 7 ತುಂಡುಗಳನ್ನು ತೂಕ ಮಾಡಿ ನೋಡಲಾಗಿ 4 ಕೆ.ಜಿ. 300 ಗ್ರಾಂ ಗಳಷ್ಟು ತೂಕವಿದ್ದು ಶ್ರೀಗಂಧದ ಮರದ 7 ತುಂಡುಗಳು ಹಾಗೂ ಚೆಕ್ಕೆಗಳು ಒಟ್ಟು ತೂಕ 15 ಕೆ.ಜಿ. 600 ಗ್ರಾಂಗಳಷ್ಟು ತೂಕವಿರುತ್ತದೆ. ಮೇಲ್ಕಂಡ ಶ್ರೀಗಂಧದ ಅಂದಾಜು ಬೆಲೆ 15,600/- ರೂ.ಗಳಾಗಿರುತ್ತದೆ ಎನ್ನುವುದು ಸರಿಯಲ್ಲ. ಮಹಜರ್ ಮಾಡುವಾಗ ಪೋಲೀಸರು ಸದರಿ ಕಳ್ಳರನ್ನು ನನಗೆ ತೋರಿಸಿದರು ಎನ್ನುವುದು ಸರಿಯಲ್ಲ. ಕೃತ್ಯಕ್ಕೆ ಉಪಯೋಗಿಸಿದ ಬೈಕ್ ನಂ.ಕೆಎ-54-ಹೆಚ್-5360 ನ್ನು ಕೂಡ ಪೋಲೀಸರು ನನ್ನ ಸಮಕ್ಷಮ ನಿಪಿ-1 ರಡಿಯಲ್ಲಿ ಜಪ್ತು ಮಾಡಿರುತ್ತಾರೆ ಎನ್ನುವುದು ಸರಿಯಲ್ಲ. ಈಗ ಸಾಕ್ಷಿಯು ನಿಪಿ-2 ರಲ್ಲಿರುವ ತಮ್ಮನ್ನು ಗುರುತು ಮಾಡಿಕೊಂಡಿರುತ್ತಾರೆ. ಅದನ್ನು ನಿಪಿ-2(ಎ) ಎಂದು ಗುರುತಿಸಲಾಗಿದೆ. ನಿಪಿ-2 ನ್ನು ತೆಗೆಯುವಾಗ ಅಲ್ಲಿ ಮರದ ತುಂಡುಗಳು ಇದ್ದವು ಹಾಗೂ ಫೋಟೋವಿನಲ್ಲಿದ್ದ ವ್ಯಕ್ತಿಗಳು ಇದ್ದರು ಎನ್ನುವುದು ನಿಜ. ಪೋಲೀಸರು ಮಹಜರ್ ನ್ನು ನನಗೆ ಸಂಪೂರ್ಣವಾಗಿ ಓದಿ ಹೇಳಿದ ನಂತರ ನಾನು ಅದಕ್ಕೆ ಸಹಿ ಹಾಕಿದ್ದೇನೆ ಎನ್ನುವುದು ಸರಿಯಲ್ಲ. ನನಗೆ ಈ ಕೇಸಿನ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಕೂಡ ಆರೋಪಿಯ ಮಾತನ್ನು ಕೇಳಿ ನನಗೆ ಏನು ಗೊತ್ತಿಲ್ಲ ನಾನು ಯಾವುದು ನೋಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಪಾಟೀ ಸವಾಲುಃ ಇಲ್ಲಾ.</u>

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

**( ಅನಿತ, ಜಿ. )**

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಅರಸೀಕೆರೆ.ದಿಃ **24-01-2024.**